ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/55/ಇಎಸ್‌ಟಿ(6)/2004 11426

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 08-08-2016.

## ಜ್ಞಾಪನ

****

ದಿನಾಂಕ: 01.07.1984ರ ನಂತರ ದಿನಗೂಲಿ ನೌಕರರಾಗಿ ನೇಮಕ ಹೊಂದಿ ದಿನಾಂಕ: 10.04.2006ಕ್ಕೆ ನಿರಂತರ 10 ವರ್ಷಗಳ ಸೇವೆ ಪೂರೈಸಿರುವ ಹಾಗೂ ದಿನಾಂಕ: 15.02.2013 ರಂದು ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರನ್ನು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ-2012ರ ವ್ಯಾಪ್ತಿಗೆ ತಂದು ಸದರಿಯವರುಗಳಿಗೆ ಸರ್ಕಾರವು ನಿಗದಿಪಡಿಸಬಹುದಾದ ಸೌಲಭ್ಯಗಳನ್ನು ಪಡೆಯಲು ಅನುವಾಗುವಂತೆ ಅರ್ಹ ದಿನಗೂಲಿ ನೌಕರರನ್ನು ಅಧಿಸೂಚಿಸಿರುವಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 77 ಶಾಸನ 2012, ದಿನಾಂಕ: 15.02.2013 ರಲ್ಲಿ ತಿಳಿಸಲಾಗಿದೆ. ಅದರಂತೆ, ತಾಂತ್ರಿಕ ಶಿಕ್ಷಣ ಇಲಾಖೆಯ ವಿವಿಧ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 02 ಮಂದಿ ದಿನಗೂಲಿ ನೌಕರರ ಹೆಸರು ಮತ್ತು ಸೇವಾ ವಿವರಗಳ ಪಟ್ಟಿಯನ್ನು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ-2012 (2013 ರ ಕರ್ನಾಟಕ ಅಧಿನಿಯಮ ಸಂಖ್ಯೆ:19) ರ 3 ನೇ ಪ್ರಕರಣದ 2 ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸದರಿ ಅಧಿನಿಯಮದ ಪ್ರಕರಣಗಳ ಉದ್ದೇಶಕ್ಕಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 267 ಟಿಪಿಇ 2014, ದಿನಾಂಕ: 28.05.2016ರ ಅನುಬಂಧದಲ್ಲಿರುವಂತೆ ಕೆಲವೊಂದು ಷರತ್ತುಗೊಳಪಟ್ಟು ಅಧಿಸೂಚಿಸಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 267 ಟಿಪಿಇ 2014, ದಿನಾಂಕ: 28.05.2016ರ ಅನುಬಂಧವನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ನಿರ್ದೇಶಕರು

ಇವರಿಗೆ,

1. ಶ್ರೀಮತಿ ರತ್ನ ಕುಮಾರಿ, ದ್ವಿತೀಯ ದರ್ಜೆ ಸಹಾಯಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು (ಪ್ರಾಂಶುಪಾಲರ ಮುಖಾಂತರ);
2. ಶ್ರೀ ವೆಂಕಟಪ್ಪ, ಗ್ರೂಪ್-ಡಿ (ಹಾಸ್ಟೆಲ್ ಪರಹೆಗಾರ), ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ (ಪ್ರಾಂಶುಪಾಲರ ಮುಖಾಂತರ).

ಪ್ರತಿ:-

1. ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು;
2. ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ;

D_IL-16